# ರಾಗ, ಅನುರಾಗ..

**ಬಹಿರಂಗವನ್ನು ನೋಡಲಾಗದ ಅಂಧಪ್ರೇಮಿಗಳಿಬ್ಬರ ಅಂತರಂಗ ಸಂವಾದದ ಕಥೆ 'ರಾಗ' ಚಿತ್ರದ್ದು. ಈ ಸಿನಿಮಾದ ಮೂಲಕ ನಟ ಮಿತ್ರ ನಾಯಕನಾಗಿದ್ದಾರೆ, ನಿರ್ಮಾಣದ ಅನುಭವಕ್ಕೂ ತಮ್ಮನ್ನು ಒಡ್ಡಿಕೊಂಡಿದ್ದಾರೆ.**

ಇದು ಪ್ರಯೋಗಶೀಲ ಸಿನಿಮಾ. ಇದು ಕಾವ್ಯಾತ್ಮಕ ಸಿನಿಮಾ. ಗಾಂಧಿನಗರದಲ್ಲಿ ಇಂಥ ಬಣ್ಣನೆಗಳೆಲ್ಲ ಬಹುತೇಕ ಸಂದರ್ಭಗಳಲ್ಲಿ ಕ್ಲೀಷೆಗಳಾಗಿರುತ್ತವೆ. ಆದರೆ, ಈ ವಿಶೇಷಣಗಳು, 'ರಾಗ' ಸಿನಿಮಾಕ್ಕೆ ಸಂಬಂಧಿಸಿದಂತೆ ನಿಜವಾದ ಅರ್ಥದಲ್ಲಿ ಪ್ರಯೋಗದಂತೆಯೂ ಕಾವ್ಯದ ಬನಿಯನ್ನು ಒಳಗೊಳ್ಳುವ ಪ್ರಯತ್ನದಂತೆಯೂ ಕಾಣಿಸುತ್ತಿವೆ.

ಮಿತ್ರ ಕನ್ನಡ ಚಿತ್ರರಂಗದಲ್ಲಿ ಹಾಸ್ಯನಟರಾಗಿ ಪ್ರಸಿದ್ಧರಾದವರು. ಅವರು ನಾಯಕನಾಗಿ ನಟಿಸಿರುವ, ನಿರ್ಮಾಪಕನ ಪಾತ್ರವನ್ನೂ ನಿರ್ವಹಿಸಿರುವ ಸಿನಿಮಾ 'ರಾಗ'. ಚಿತ್ರೋದ್ಯಮ ಕಲ್ಪಿಸಿಕೊಂಡಿರುವ ಜನಪ್ರಿಯ ನಾಯಕನ ಪಾತ್ರದ ವ್ಯಾಕರಣಕ್ಕೆ ಯಾವ ರೀತಿಯಿಂದಲೂ ಒಗ್ಗದ ಮಿತ್ರ, ಮುಖ್ಯ ಪಾತ್ರದಲ್ಲಿ ಅಭಿನಯಿಸಿರುವುದೇ ಸಿನಿಮಾದ ಪ್ರಯೋಗಶೀಲತೆಗೆ ಉದಾಹರಣೆಯಂತಿದೆ.

ಇದು ಇಬ್ಬರು ಕುರುಡುಪ್ರೇಮಿಗಳ ಕಥನ. ಪ್ರೇಮ ಕುರುಡು ಎನ್ನುತ್ತಾರೆ. ಆದರಿಲ್ಲಿ ಪ್ರೇಮಿಗಳೇ ಕುರುಡು. ಮಿತ್ರ ಹಾಗೂ ಭಾಮಾ ಒಳಗಣ್ಣಿನಿಂದ ಸಂವಹನ ನಡೆಸುವ ಅಪೂರ್ವ ಜೋಡಿಯ ಪಾತ್ರದಲ್ಲಿ ನಟಿಸಿದ್ದಾರೆ. ಈ ಪ್ರೇಮಕಥನ ಯಾವ ಕಾವ್ಯಕ್ಕೂ ಕಡಿಮೆಯಿಲ್ಲ ಎನ್ನುತ್ತಿದೆ 'ಮಿತ್ರ'ಮಂಡಳಿ. ಪಿ.ಸಿ. ಶೇಖರ್ ಚಿತ್ರದ ನಿರ್ದೇಶಕರು.

'ಇದು ಕತ್ತಲ ಲೋಕದಲ್ಲಿ ಬೆಳಕಿನ ರಾಗ. ಅರ್ಜುನ್ ಜನ್ಯರ ಸಂಗೀತದ ಮಾಧುರ್ಯ ಹಾಗೂ ಪ್ರತಿ ದೃಶ್ಯವನ್ನೂ ಪೇಂಟಿಂಗ್‌ನಂತೆ ಸಿಂಗರಿಸಿರುವ ವೈದಿ ಅವರ ಛಾಯಾಗ್ರಹಣ ಚಿತ್ರಕ್ಕೆ ಕಾವ್ಯದ ಚೌಕಟ್ಟು ದೊರಕಿಸಿಕೊಟ್ಟಿದೆ' ಎನ್ನುತ್ತಾರೆ ಶೇಖರ್. 'ರೋಮಿಯೊ', 'ಸ್ಟೈಲ್ ಕಿಂಗ್' ಹಾಗೂ 'ಅರ್ಜುನ್' ಚಿತ್ರಗಳ ಮೂಲಕ ಗಾಂಧಿನಗರದಲ್ಲಿ ಗುರ್ತಿಸಿಕೊಂಡಿರುವ ಅವರಿಗೆ, 'ರಾಗ' ತಮ್ಮ ವೃತ್ತಿಜೀವನದ ಮಹತ್ವಾಕಾಂಕ್ಷೆಯ ಸಿನಿಮಾ ಎನ್ನಿಸಿದೆ.

ಮಿತ್ರ ಅವರ ಪಾಲಿಗೂ 'ರಾಗ' ತಮ್ಮ ವೃತ್ತಿಬದುಕಿನ ಹೊಸ ಆಲಾಪದಂತೆ ಕಾಣಿಸಿದೆ. ನಟನಾಗಿ ಸದಾ ಹೊಸತನಕ್ಕೆ ಹಂಬಲಿಸುವ ಅವರಿಗೆ ನಿರ್ದೇಶಕರು ಮೊದಲ ಬಾರಿಗೆ ಕಥೆ ಹೇಳಿದಾಗ ಥ್ರಿಲ್ ಅನ್ನಿಸಿದೆ. ವಿಶಿಷ್ಟ ಪಾತ್ರವನ್ನು ಬಿಟ್ಟುಕೊಡಲು ಮನಸ್ಸು ಬಾರದ ಅವರು, ನಿರ್ಮಾಪಕನ ಪಾತ್ರದ ಸವಾಲಿಗೂ ಎದುರಾಗಿದ್ದಾರೆ.

ಪಾತ್ರಕ್ಕೆ ಒಗ್ಗಿಕೊಳ್ಳುವುದು ಮಿತ್ರ ಅವರ ಪಾಲಿಗೆ ಸಲೀಸೇನೂ ಆಗಿರಲಿಲ್ಲ. ಒಳಗಣ್ಣಿನ ಮೂಲಕ ಮಾತನಾಡುವುದು ಯಾವುದೇ ಕಲಾವಿದನಿಗೂ ಸವಾಲು. ಅವರ ದೇಹಾಕಾರ ಕೂಡ ಪಾತ್ರಕ್ಕೆ ಒಗ್ಗುವಂತಿರಲಿಲ್ಲ. ಹಾಗಾಗಿ, ಕೆಲವೇ ದಿನಗಳಲ್ಲಿ ಹತ್ತು ಕೇಜಿ ತೂಕ ಇಳಿಸಿಕೊಂಡು ನಿರ್ದೇಶಕರ ಮುಂದೆ ನಿಂತರು. ಬಾಹ್ಯ ಚಹರೆಯನ್ನು ಬದಲಿಸುವ ಮೂಲಕ ನಿರ್ದೇಶಕರು ಮಿತ್ರ ಅವರಿಗೆ ಚಿತ್ರದಲ್ಲಿ ಹೊಸತೊಂದೇ ರೂಪು ನೀಡಿದರು.

ಮಿತ್ರ ಅವರೊಳಗಿನ ಅದ್ಭುತ ನಟ 'ರಾಗ' ಚಿತ್ರದ ಮೂಲಕ ಅನಾವರಣಗೊಂಡಿದ್ದಾನೆ ಎನ್ನುವುದು ನಿರ್ದೇಶಕರ ಅನಿಸಿಕೆ. ನಾಯಕಿ ಪಾತ್ರಕ್ಕೆ ಕೂಡ ಚಿತ್ರದಲ್ಲಿ ಸಾಕಷ್ಟು ಪ್ರಾಮುಖ್ಯತೆ ಇದೆಯಂತೆ. ಚಿತ್ರದ ಟ್ರೈಲರ್ ಈಗಾಗಲೇ ಬಿಡುಗಡೆಯಾಗಿದ್ದು, ಚಿತ್ರರಸಿಕರ ಗಮನಸೆಳೆದಿದೆ.

ಅವಿನಾಶ್, ಜೈಜಗದೀಶ್, ರಮೇಶ್ ಭಟ್, ಸಿಹಿ ಕಹಿ ಚಂದ್ರು ಅವರಂತಹ ಅನುಭವಿಗಳು 'ರಾಗ' ತಾರಾಬಳಗದಲ್ಲಿದ್ದಾರೆ. ಏಪ್ರಿಲ್‌ನಲ್ಲಿಯೇ ಚಿತ್ರವನ್ನು ತೆರೆ ಕಾಣಿಸಲು 'ಮಿತ್ರ'ಮಂಡಳಿ ಪ್ರಯತ್ನಿಸುತ್ತಿದೆ.

■ ರಘು

